# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 147 |
| ಉತ್ತರಿಸುವ ದಿನಾಂಕ | 05-03-2025 |
| ಮಾನ್ಯ ಸದಸ್ಯರ ಹೆಸರು | ಶ್ರೀ ಚಿದಾನಂದ್ ಎಂ ಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ನೋಂದಣಿ ಮತ್ತು ಮುದ್ರಾಂಕ ಇಲಾಖೆಯಿಂದ ರಾಜ್ಯದ ಬೊಕ್ಕಸಕ್ಕೆ ಬರುತ್ತಿರುವ ಆದಾಯವೆಷ್ಟು; (ಕಳೆದ ಐದು ವರ್ಷದ ಆದಾಯದ ವಿವರ ನೀಡುವುದು) | ನೋಂದಣಿ ಮತ್ತು ಮುದ್ರಾಂಕ ಇಲಾಖೆಯಿಂದ ರಾಜ್ಯದ ಬೊಕ್ಕಸಕ್ಕೆ ಕಳೆದ 5 ವರ್ಷಗಳಲ್ಲಿ ಬಂದಿರುವ ಆದಾಯದ ವಿವರಗಳು :<br><br>ಕ್ರ. ಸಂ. \| ವರ್ಷಗಳು \| ಸಂಗ್ರಹಿಸಿದ ಆದಾಯದ ರೂ. ಕೋಟಿಗಳಲ್ಲಿ<br>1 \| 2019-20 \| 11451.05<br>2 \| 2020-21 \| 10705.16<br>3 \| 2021-22 \| 14246.02<br>4 \| 2022-23 \| 17873.97<br>5 \| 2023-24 \| 20287.30 |
| ಆ) | ಈ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರ ಸಂಖ್ಯೆ ಎಷ್ಟು; ಇವರುಗಳಿಗೆ ನೀಡುತ್ತಿರುವ ವೇತನ ಎಷ್ಟು; | 1. ಗಣಕೀಕರಣ ಶಾಖೆಯಲ್ಲಿ ಕಾವೇರಿ ಯೋಜನಾ ಉಸ್ತುವಾರಿ ಘಟಕಕ್ಕೆ ಮೆ:ಕೆಪಿಎಂಜಿ ಅಡ್ವೇಜರಿ ಸರ್ವೀಸಸ್ ಲಿ. ಸಂಸ್ಥೆಯಿಂದ 05 ತಾಂತ್ರಿಕ ಸಮಲೋಚಕರನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆದಿದ್ದು, ಸದರಿ ಹುದ್ದೆಗಳಿಗೆ ಇಲಾಖೆಯಿಂದ ಪಾವತಿಸುತ್ತಿರುವ ಸಂಭಾವನೆ ಈ ಕೆಳಕಂಡಂತಿದೆ:<br><br>ಕ್ರ. ಸಂ \| ಹುದ್ದೆಯ ಹೆಸರು \| ಮಾಸಿಕ ಹೊರಗುತ್ತಿಗೆ ಮೊತ್ತ (ರೂ)<br>1 \| Project Manager (O&M) \| 3,87,748<br>2 \| Project Manager (NI) \| 3,87,748<br>3 \| Technical Consultant - 1 \| 2,06,854<br>4 \| Technical Consultant - 2 \| 2,06,854<br>5 \| Database Administrator \| 1,77,031<br><br>2. ಬಿಲ್ಡ್ ಓನ್ ಆಪರೇಟರ್ ಮಾದರಿಯಲ್ಲಿ ಐ.ಟಿ. ಉಪಕರಣಗಳ ಪೂರೈಕೆ, ಅಳವಡಿಕೆ, ಕಾರ್ಯಾಚರಣೆ ಹಾಗೂ ನಿರ್ವಹಣೆ ಮತ್ತು ಮಾನವ ಸಂಪನ್ಮೂಲ ಪೂರೈಕೆ ಸೇವೆಯನ್ನು ಮೆ:ಸಿಎಂಎಸ್ ಕಂಪ್ಯೂಟರ್ ಲಿ. ಸಂಸ್ಥೆಯು ದಿನಾಂಕ: 16-11-2022 ರಿಂದ |

<table>
<tr>
<td></td>
<td></td>
<td>ಒದಗಿಸುತ್ತಿರುತ್ತದೆ. BOO ಮಾದರಿಯಲ್ಲಿ ಸೇವಾ ಪೂರೈಕೆದಾರರು ನಿಯೋಜಿಸಿರುವ ಮಾನವ ಸಂಪನ್ಮೂಲದ ವಿವರ ಈ ಕೆಳಕಂಡಂತಿದೆ:<br><br>
<table>
<tr><th>Sl. No.</th><th>Name of the Post</th><th>Number</th></tr>
<tr><td>1</td><td>Project Director</td><td>1</td></tr>
<tr><td>2</td><td>Project Manager</td><td>1</td></tr>
<tr><td>3</td><td>Project Manager (IS)</td><td>1</td></tr>
<tr><td>4</td><td>Assistant Manager</td><td>5</td></tr>
<tr><td>5</td><td>Database Administrator</td><td>1</td></tr>
<tr><td>6</td><td>System Admin</td><td>2</td></tr>
<tr><td>7</td><td>RIM Engineer-Server</td><td>2</td></tr>
<tr><td>8</td><td>RIM Engineer –Network</td><td>2</td></tr>
<tr><td>9</td><td>Rim Engineer-End User</td><td>2</td></tr>
<tr><td>10</td><td>Hardware Engineers- System Admin and Application Support Engineer</td><td>73</td></tr>
<tr><td>11</td><td>Administrative Assistants</td><td>12</td></tr>
<tr><td>12</td><td>Service Desk Executive</td><td>8</td></tr>
<tr><td>13</td><td>Data Entry Operators</td><td>1056</td></tr>
</table>
<br>ಸದರಿ ಯೋಜನೆಯಲ್ಲಿ ಸೇವಾ ಪೂರೈಕೆದಾರರಿಗೆ ಸೇವಾ ವೆಚ್ಚವನ್ನು ದಸ್ತಾವೇಜಿನ ನೋಂದಣಿಯಲ್ಲಿ ಸ್ಕ್ಯಾನಿಂಗ್ ಆಗುವ ಪುಟಗಳ ಸಂಖ್ಯೆಯ ಆಧಾರದ ಮೇಲೆ ಪಾವತಿ ಮಾಡಲಾಗುತ್ತಿದ್ದು, ಹಾಗೂ ಮಾನವ ಸಂಪನ್ಮೂಲ ಸೇವೆಗೆ ಯಾವುದೇ ಪ್ರತ್ಯೇಕ ಪಾವತಿ ಇರುವುದಿಲ್ಲ. ಈ ಮಾನವ ಸಂಪನ್ಮೂಲಗಳನ್ನು ನೋಂದಣಿ ಮತ್ತು ಮುದ್ರಾಂಕ ಇಲಾಖೆಯಿಂದ ನೇರವಾಗಿ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿರುವುದಿಲ್ಲ.</td>
</tr>
<tr>
<td>ಇ)</td>
<td>ಹೊರಗುತ್ತಿಗೆ ನೌಕರರಿಗೆ ಕಳೆದ ಆರು ತಿಂಗಳುಗಳಿಂದ ವೇತನ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇವರಿಗೆ ವೇತನ ನೀಡದೆ ಇರಲು ಕಾರಣವೇನು; ಹಾಗೂ ಇವರಿಗೆ ವೇತನ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;</td>
<td>ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ನೇರವಾಗಿ ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡಿರುವುದಿಲ್ಲ.<br><br>2024-25ನೇ ಸಾಲಿನಲ್ಲಿ ಗಣಕೀಕರಣ ಶಾಖೆಗೆ ಅನ್ವಯಿಸುವ ಲೆಕ್ಕ ಶೀರ್ಷಿಕೆ ಸಂಖ್ಯೆ: 2030-03-001-2-04-051 ರಡಿಯಲ್ಲಿ ಆಯವ್ಯಯದಲ್ಲಿ ರೂ.1.88 ಕೋಟಿಗಳ ಅನುದಾನ ಬಿಡುಗಡೆ ಆಗಿದುದ್ದರಿಂದ ಇಲಾಖೆಯ ಗಣಕೀಕರಣ ಶಾಖೆಗೆ ಸೇವೆ ನೀಡುತ್ತಿರುವ ಸೇವಾ ಪೂರೈಕೆದಾರರ ಬಿಲ್ಲುಗಳನ್ನು ಪಾವತಿಸಲು ಸಾಧ್ಯವಾಗಿರುವುದಿಲ್ಲ. ನಂತರ ಪೂರಕ ಅಂದಾಜು-2</td>
</tr>
</table>

| | | |
|---|---|---|
| | | ರಲ್ಲಿ ಹೆಚ್ಚುವರಿ ಅನುದಾನ ಪಡೆದು, ದಿನಾಂಕ: 27-02-2025 ರ ಸರ್ಕಾರಿ ಆದೇಶದಲ್ಲಿ BOO Model ಆಧಾರದ ಮೇಲೆ ಸೇವೆ ನೀಡುತ್ತಿರುವ ಮೆ:ಸಿಎಂಎಸ್ ಕಂಪ್ಯೂಟರ್ಸ್ ಲಿ. ಸಂಸ್ಥೆಯಡಿ ಕರ್ತವ್ಯ ನಿರ್ವಹಿಸುತ್ತಿರುವ ಡೇಟಾ ಎಂಟ್ರಿ ಆಪರೇಟರ್‌ಗಳಿಗೆ ವೇತನ ಪಾವತಿಸಲು ರೂ.20.00 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. |
| ಈ) | ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಪೇಪರ್ ಖರೀದಿ ಮತ್ತು ಅದರ ಬಿಲ್ ಪಾವತಿಗೆ ಅನುಸರಿಸುವ ಕ್ರಮಗಳಾವುದು; ಕಳೆದ ಎರಡು ವರ್ಷಗಳಲ್ಲಿ ಪೇಪರ್ ಖರೀದಿಗಾಗಿ ಆದ ವೆಚ್ಚವೆಷ್ಟು; ಸರ್ಕಾರ ಬಿಡುಗಡೆ ಮಾಡಿದ ಅನುದಾವೆಷ್ಟು? (ವರ್ಷವಾರು ವಿವರ ನೀಡುವುದು) | ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ದಿ: 16-11-2022 ರಿಂದ ಮೆ॥ ಸಿಎಂಎಸ್ ಕಂಪ್ಯೂಟರ್ ಲಿ. ಸಂಸ್ಥೆಯು ಬಿಲ್ಡ್ ಓನ್ ಆಪರೇಟರ್ ಮಾದರಿಯಲ್ಲಿ ಐ.ಟಿ. ಉಪಕರಣಗಳ ಪೂರೈಕೆ, ಅಳವಡಿಕೆ, ಕಾರ್ಯಾಚರಣೆ ಹಾಗೂ ನಿರ್ವಹಣೆ ಮತ್ತು ಮಾನವ ಸಂಪನ್ಮೂಲ ಪೂರೈಕೆ ಸೇವೆಯನ್ನು ಒದಗಿಸುತ್ತಿರುತ್ತದೆ. BOO ಯೋಜನೆಯಡಿಯಲ್ಲಿ ಸೇವಾ ಪೂರೈಕೆದಾರರೇ ಇಲಾಖೆಯ ಕಛೇರಿಗಳಿಗೆ ಅಗತ್ಯವಿರುವ ಪೇಪರ್ ಅನ್ನು ಸರಬರಾಜು ಮಾಡುತ್ತಿದ್ದು, ಇಲಾಖೆಯಿಂದ ಪ್ರತ್ಯೇಕವಾಗಿ ಪೇಪರ್ ಖರೀದಿ ಮಾಡುತ್ತಿರುವುದಿಲ್ಲ. |

ಕಂಇ/41/ಎಂಎನ್‌ಎಸ್‌ಎ/2025

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು